ನಾನು ಕೇಳಿದ್ದೇನೆ. ನೀವು ಏನು ಹೇಳುತ್ತಿರೋ, ಅದನ್ನು ಕೇಳಿ, ಅದಕ್ಕೆ ಉತ್ತರವನ್ನು ಕೊಡುವುದಕ್ಕೂ ನಾನು ತಯಾರಿದ್ದೇನೆ.

ಉಪಾಧ್ಯಕ್ಷರು :- ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡರವರೆ, ಕೇಳಿ.

ಈ) ವಿಷಯ: ಶ್ರೀರಂಗಪಟ್ಟಣ ತಾಲ್ಲೂಕು ಕೆ.ಆರ್.ಸಾಗರ, ಬೆಳಗೊಳ ಗ್ರಾಮದ ಪದವಿಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಹಾಗೂ ನೂತನ ಪ್ರಥಮ ಕಾಲೇಜು ಸ್ಥಾಪನೆ ಬಗ್ಗೆ.

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) :- ಮಾನ್ಯ ಉಪಾಧ್ಯಕ್ಷರೆ, ...

(ಮಾನ್ಯ ಮಂತ್ರಿಯವರು ಸಭೆಯಲ್ಲಿ ಓದಿದ ಹೇಳಿಕೆಯನ್ನು ಲಗತ್ತಿಸಿದೆ)

ವಿಧಾನ ಸಭಾ ಸದಸ್ಯರಾದ ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಇವರ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುವ ಪ್ರಶ್ನೆಗೆ ಉತ್ತರ :

ವಿಷಯ :- ಶ್ರೀರಂಗಪಟ್ಟಣ ತಾಲ್ಲೂಕು ಕೆ ಆರ್ ಸಾಗರ; ಬೆಳಗೊಳ ಗ್ರಾಮದ ಪದವಿಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣ ಅಪೂರ್ಣಗೊಂಡಿದ್ದು, ಕಾಮಗಾರಿ ಪೂರ್ಣಗೊಳಿಸಲು ಅಗತ್ಯವಾದ ಅನುದಾನ ಹಾಗೂ ಕೆ ಆರ್ ಸಾಗರದಲ್ಲಿ ನೂತನ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ :-

ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ ಆರ್ ಸಾಗರ, ಇಲ್ಲಿಗೆ ಆರ್.ಐ.ಡಿ.ಎಫ್-12ರ ಯೋಜನೆಯಡಿಯಲ್ಲಿ ರೂ.09.80 ಲಕ್ಷಗಳ ವೆಚ್ಚದಲ್ಲಿ 02 ಕೊಠಡಿಗಳು, ಹಾಗೂ ಅಪೆಂಡಿಕ್ಸ್-ಇ ಯೋಜನೆಯಲ್ಲಿ 15.00 ಲಕ್ಷಗಳು ಮಂಜೂರು ಮಾಡಲಾಗಿದೆ. ಆರ್.ಐ.ಡಿ.ಎಫ್-12ರ ಕಾಮಗಾರಿ ಪ್ರಗತಿಯಲ್ಲಿದ್ದು ಈ ಕಾಮಗಾರಿಗೆ 7.94 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅಪೆಂಡಿಕ್ಸ್-ಇ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತಿದ್ದು ಸದರಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಅಭಿಯಂತರರಿಗೆ ದಿನಾಂಕ : 01-10-2008 ರಂದು ರೂ.5 ಕೋಟಿಗಳನ್ನು ಹಾಗೂ ದಿನಾಂಕ : 13-01-2009 ರಂದು ರೂ.2.50

ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ರೀತಿ ಅನುದಾನ ಬಿಡುಗಡೆ ಮಾಡಿರುವ ಆದೇಶದಲ್ಲಿ ಕಾಮಗಾರಿಗಳ ಪ್ರಗತಿಯನ್ನಾಧರಿಸಿ ಬಾಕಿ ಬಿಲ್ಲುಗಳಿಗೆ ಆದ್ಯತೆ ನೀಡಿ ಪಾವತಿ ಮಾಡುವಂತೆ ಷರತ್ತು ವಿಧಿಸಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳಗೊಳ, ಇಲ್ಲಿಗೆ ಅಪೆಂಡಿಕ್ಸ್-ಇ ಯೋಜನೆಯಡಿ ರೂ.50 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದೆ. ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತಿದ್ದು ಸದರಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಅಭಿಯಂತರರಿಗೆ ದಿನಾಂಕ : 01-10-2008 ರಂದು ರೂ. 5 ಕೋಟಿಗಳನ್ನು ಹಾಗೂ ದಿನಾಂಕ : 13-01-2009 ರಂದು ರೂ.2.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ರೀತಿ ಅನುದಾನ ಬಿಡುಗಡೆ ಮಾಡಿರುವ ಆದೇಶದಲ್ಲಿ ಕಾಮಗಾರಿಗಳ ಪ್ರಗತಿಯನ್ನಾಧರಿಸಿ ಬಾಕಿ ಬಿಲ್ಲುಗಳಿಗೆ ಆದ್ಯತೆ ನೀಡಿ ಪಾವತಿ ಮಾಡುವಂತೆ ಷರತ್ತು ವಿಧಿಸಲಾಗಿದೆ. ಕಟ್ಟಡದ ಎರಡನೇ ಮಹಡಿಯ ನಿರ್ಮಾಣ ಕಾರ್ಯ ಮೇಲ್ಛಾವಣಿ ಹಂತಕ್ಕೆ ತಲುಪಿರುತ್ತದೆ.

ಕೆ ಆರ್ ಸಾಗರದಲ್ಲಿ ನೂತನ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡುವ ವಿಷಯ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಇನ್ನೊಂದು ವಿಷಯ ಡಿಗ್ರಿ ಕಾಲೇಜ್ ಬಗ್ಗೆ ಕೇಳಿದ್ದಾರೆ. ಇದು ನನಗೆ ಬರುವುದಿಲ್ಲ, ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಬರುತ್ತದೆ. ಅದನ್ನು ತಾವು ಪ್ರತ್ಯೇಕವಾಗಿ ಕೇಳಬಹುದು. ಅದರೆ ಮಾನ್ಯ ಸದಸ್ಯರ ಅನುಕೂಲಕ್ಕೆ ಒಂದು ಮಾತನ್ನು ಹೇಳಬಯಸುವುದೆನೆಂದರೆ, ನಮಗೆ ಜೂನಿಯರ್ ಕಾಲೇಜ್ ಆರ್‌ಐಡಿಎಫ್-12ರಲ್ಲಿ ಕಟ್ಟುವುದಕ್ಕೆ ಮತ್ತು ಅಪೆಂಡಿಕ್ಸ್-ಇ ನಲ್ಲಿ ಕಟ್ಟುವುದಕ್ಕೆ ಕಳೆದ ವರ್ಷದಲ್ಲಿ ನಾವು ಏನು ಪ್ರಯತ್ನವನ್ನು ಮಾಡಿದೆವೊ, ಅದಕ್ಕೆ ಇಡೀ ರಾಜ್ಯದಲ್ಲಿ ಹಣದ ಕೊರತೆ ಇದೆ. ತಾವು ತಮ್ಮ ಕ್ಷೇತ್ರದ ಎರಡು ಕಾಲೇಜುಗಳ ಬಗ್ಗೆ ಅದು ಕೆ.ಆರ್.ಸಾಗರ ಮತ್ತು ಬೆಳಗೊಳ ಗ್ರಾಮಕ್ಕೆ ಕೇಳಿದ್ದೀರಿ. ಅದರೆ ವೆಚ್ಚ ಹೆಚ್ಚು ಆಗುತ್ತಿರುವುದರಿಂದ SR rate, ಇತ್ಯಾದಿಗಳು ಹೆಚ್ಚಾಗುತ್ತಿರುವುದರಿಂದ ಇಡೀ ರಾಜ್ಯದಲ್ಲಿ ನಮಗೆ ಹಣಕಾಸಿನ ಕೊರತೆಯಾಗಿದೆ. ಹಾಗಾಗಿ ಅನೇಕ ಜೂನಿಯರ್ ಕಾಲೇಜುಗಳ ಕೆಲಸ ಅರ್ಧಕ್ಕೆ ನಿಂತಿದೆ. ಇಲ್ಲಿ ಕೆಲಸವಾಗಿರುವುದಕ್ಕೆ ಬಿಲ್ ಹಣವನ್ನು ಕೊಡುವುದಕ್ಕೆ ಆಗಿಲ್ಲ. ಈ ಸ್ಥಿತಿಯಲ್ಲಿ ನಾವು ಇದ್ದೇವೆ. ಆ ವಸ್ತುಸ್ಥಿತಿ ನಮ್ಮ ಸರ್ಕಾರದ ಗಮನದಲ್ಲಿದೆ. ನಮ್ಮ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ

ಮಾಡುತ್ತಿದ್ದೇವೆ. ಆರ್‌ಐಡಿಎಫ್-12ರದ್ದು ಏನೂ ತೊಂದರೆಯಾಗುವುದಿಲ್ಲ. ಅಲ್ಲಿ ನಾವು ಎಷ್ಟು ಹಣವನ್ನು ಕೊಟ್ಟಿದ್ದೇವೆಯೋ, ಅಷ್ಟು ಹಣವನ್ನು ನಾವು ತಕ್ಷಣ ಬಿಡುಗಡೆ ಮಾಡುತ್ತೇವೆ. ಆ ಹಣ ಖರ್ಚು ಆಗುತ್ತದೆ. ಆರ್‌ಐಡಿಎಫ್‌ನಲ್ಲೂ ಸಹ 9,80,000 unit cost ಎಂದು ಮಾಡಿದ್ದೇವೆ. ಅದರೆ ಅದು ಹತ್ತು ಲಕ್ಷ, ಹನ್ನೆರಡು ಲಕ್ಷ, ಆಗುತ್ತಿದೆ. ಆ ಹೆಚ್ಚುವರಿ ಹಣ ನಮಗೆ ಬೇಕಾಗುತ್ತದೆ.

ಹಾಗೆಯೇ ಅಪೆಂಡಿಕ್ಸ್-ಇ ಯಲ್ಲಿ ಕೊಟ್ಟಿರುವಂಥದ್ದಕ್ಕೂ ಸಹ ನಮಗೆ ಹೆಚ್ಚುವರಿ ಹಣ ಬೇಕಾಗುತ್ತದೆ. ಆರ್ಥಿಕ ಇಲಾಖೆಯ ಜೊತೆಯಲ್ಲಿ ಇದರ ಬಗ್ಗೆ ನಾವು ಮಾತುಕತೆ ಮಾಡುತ್ತಿದ್ದು, ಹೆಚ್ಚಿನ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನವನ್ನೂ ಕೂಡ ಮಾಡುತ್ತಿದ್ದೇವೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ :- ಮಾನ್ಯ ಉಪಾಧ್ಯಕ್ಷರೆ, ಅಪೆಂಡಿಕ್ಸ್-ಇ 4202 ರಲ್ಲಿ ಕೆ.ಆರ್.ಸಾಗರ ಜೂನಿಯರ್ ಕಾಲೇಜ್‌ಗೆ ಪ್ರಥಮ ಹಂತವಾಗಿ ಸುಮಾರು 15 ಲಕ್ಷ ರೂಪಾಯಿ ಮಂಜೂರು ಮಾಡಿದ್ದರು. ದ್ವಿತೀಯ ಹಂತವಾಗಿ 20 ಲಕ್ಷ ರೂಪಾಯಿ ಗ್ರಾಂಟ್ ಮಂಜೂರು ಮಾಡುವುದಕ್ಕೆ ಆದೇಶ ಮಾಡಲಾಗಿತ್ತು. ಕೆ.ಆರ್.ಸಾಗರ ಐತಿಹಾಸಿಕ ಮತ್ತು ಪ್ರವಾಸೋದ್ಯಮ ಸ್ಥಳವಾಗಿ ಇಡೀ ರಾಜ್ಯ, ದೇಶ ಮತ್ತು ಪ್ರಪಂಚದ ಗಮನ ಸೆಳೆಯುವ ಸ್ಥಳವಾಗಿದೆ. ಪ್ರಪಂಚದ ನಾನಾ ಭಾಗದಿಂದ ಇಲ್ಲಿಗೆ ಪ್ರವಾಸಿಗರು ಬರುತ್ತಾರೆ. ಆದರೆ, ಈ ಕಟ್ಟಡ ಅಲ್ಲಿನ ಮುಖ್ಯ ರಸ್ತೆಯಲ್ಲಿ ಸ್ಕೆಲಿಟನ್ ರೀತಿಯಲ್ಲಿ ನಿಂತಿದೆ. ಸನ್ಮಾನ್ಯ ಸಚಿವರ ಅದರ ಬಗ್ಗೆ ಹೆಚ್ಚಿನ ಗಮನ ಹರಿಸುವುದಕ್ಕೆ ಮಾನ್ಯ ಉಪಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಸ್ಕೆಲಿಟನ್ ರೀತಿಯಲ್ಲಿ ನಿಂತಿರುವ ಆ ಕಟ್ಟಡವನ್ನು ಪೂರ್ಣ ಮಾಡುವುದಕ್ಕೆ ಬೇಕಾಗಿ ರತಕ್ಕಂಥ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಆದೇಶ ಮಾಡಿದ್ದಾರೆ. ಅದೇನೆಂದರೆ, ಕಾರ್ಯದರ್ಶಿ, ಪ್ರಾಥಮಿಕ ಪ್ರೌಢ ಶಿಕ್ಷಣ ಇಲಾಖೆಯವರಿಗೆ ಪತ್ರ ಬರೆದು ಶ್ರೀರಂಗಪಟ್ಟಣ ಶಾಲೆಯ ಅಭಿವೃದ್ಧಿಗೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ಆದೇಶ ಮಾಡಿದ್ದರೂ ಕೂಡ ಇದುವರೆಗೂ ಆ ಕಾಮಗಾರಿಯಾಗಿಲ್ಲ. ಶ್ರೀರಂಗಪಟ್ಟಣ-ಮೈಸೂರು ರಸ್ತೆಯಲ್ಲಿ ಇದು ಇದೆ. ಕೆ.ಆರ್.ಸಾಗರಕ್ಕೆ ಹೋಗಬೇಕಾಗಿರತಕ್ಕಂಥ ಎಲ್ಲಾ ಜನರು ಬೆಳಗೊಳ ಗ್ರಾಮದ ಮುಖಾಂತರವೇ ಸಂಚಾರ ಮಾಡಬೇಕು. ಇದು ಸಹಾ ಮುಖ್ಯ ರಸ್ತೆಯಾಗಿದೆ. ಸುಮಾರು 50 ಲಕ್ಷ ರೂಪಾಯಿಗಳನ್ನು ಅದಕ್ಕೆ ಬಿಡುಗಡೆ ಮಾಡಿದ್ದರು. ಪ್ರಥಮ ಹಂತದಲ್ಲಿ ಕಟ್ಟಡದ ಮೊದಲನೇ ಮಹಡಿ ಕೆಲಸ ಮುಗಿದಿದೆ. ಎರಡನೇ

ಮಹಡಿ ಸ್ಲೆಲಿಟನ್ ರೀತಿಯಲ್ಲಿ ನಿಂತಿದೆ. ಮತ್ತೆ ಯಾವುದೇ ಮಹಡಿಯಲ್ಲಿ ಫ್ಲೋರಿಂಗ್ ಕೆಲಸ ಆಗಿಲ್ಲ. ಕಿಟಕಿ ಬಾಗಿಲುಗಳು ಇಲ್ಲ. ಬೆಳಗೊಳದಿಂದ ಮೈಸೂರಿಗೆ ಸುಮಾರು 6 ಕಿ.ಮೀ. ಅಗುತ್ತದೆ. ಆ ಕಟ್ಟಡದಲ್ಲಿ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್ ತರಗತಿಗಳು ನಡೆಯುತ್ತಿವೆ. ಹೈಸ್ಕೂಲ್‌ನಲ್ಲಿ 365 ಮಕ್ಕಳು ಮತ್ತು ಮಿಡ್ಲ್ ಸ್ಕೂಲ್‌ನಲ್ಲಿ 454 ಮಕ್ಕಳು DPEPಯಲ್ಲಿ 250 ಮಕ್ಕಳು ಮತ್ತು ಪಿಯುಸಿಯಲ್ಲಿ ..

ಉಪಾಧ್ಯಕ್ಷರು :- ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ. ಬೇಕಾದರೆ, ಕ್ಲಾರಿಫಿಕೇಷನ್ ಮಾತ್ರ ಕೇಳಿ. ಯಾವ್ಯಾವ ಹಂತದಲ್ಲಿ ಹಣ ಬಿಡುಗಡೆಯಾಗುತ್ತದೆ ಎಂಬುದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಿಮಗೆ ಬೇರೆ ಏನು ತೊಂದರೆ ಇದೆ ಎಂಬ ಬಗ್ಗೆ ಕೇಳಿ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ :- ಮಾನ್ಯ ಉಪಾಧ್ಯಕ್ಷರೆ, ಸಾವಿರ ಮಕ್ಕಳಿಗಿಂತ ಹೆಚ್ಚು ಸಂಖ್ಯೆಯಲ್ಲಿರತಕ್ಕಂಥ ಸಂಸ್ಥೆಯಲ್ಲಿ ಕಟ್ಟಡ ಇಲ್ಲದೆ ಶಿಕ್ಷಕರು ಹೊರಗಡೆ ಬಂದು ಮಕ್ಕಳಿಗೆ ಪಾಠ ಮಾಡುತ್ತಿದ್ದಾರೆ. ಅಲ್ಲಿ ಕಟ್ಟಡದ ಅವಶ್ಯಕತೆ ಇದೆ. ದಯಮಾಡಿ ಈ ಸಾಲಿನಲ್ಲಿ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ. ಮತ್ತೆ ಇದರ ಜೊತೆಗೆ ಬೆಳಗೊಳ ಮತ್ತು ಕೆ.ಆರ್.ಸಾಗರ ಮುಖ್ಯ ರಸ್ತೆಯಾಗಿದೆ. ಇಲ್ಲಿ ಫ್ಲೋರೈಡ್ ನೀರಿನ ಸಮಸ್ಯೆ ಮೊದಲಿನಿಂದಲೂ ಸಹ ಇದೆ. ನಮ್ಮ ಪಕ್ಕದ ಚಾಮುಂಡೇಶ್ವರಿ ಕ್ಷೇತ್ರದ ಮಾನ್ಯ ಶಾಸಕರೂ ಕೂಡ ನೀರಿನ ಸಮಸ್ಯೆ ಬಗ್ಗೆ ಒತ್ತಾಯ ಮಾಡಿದ್ದಾರೆ. ಅಲ್ಲಿ ಯಾವುದೇ ಕಾಮಗಾರಿಗಳು ಕೂಡ ಅರ್ಧಕ್ಕೆ ನಿಂತುಕೊಳ್ಳುತ್ತಿವೆ. ಈ ರೀತಿ ಏತಕ್ಕೆ ಆಗುತ್ತಿದೆ ಎಂದು ಗೊತ್ತಾಗುತ್ತಿಲ್ಲ. ಪದವಿಪೂರ್ವ ಕಾಲೇಜಿನ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಈಗ ಅಲ್ಲಿ ಪ್ರೈಮರಿ ಸ್ಕೂಲ್‌ನಲ್ಲಿ ಪ್ರಥಮ ದರ್ಜೆ ಕಾಲೇಜು ನಡೆಯುತ್ತಿದೆ. ಈ ರೀತಿಯಾದ ಪರಿಸ್ಥಿತಿ ಅಲ್ಲಿರುವಾಗ ಜನ ಸಾಮಾನ್ಯರಿಗೆ ನಾವು ಯಾವ ರೀತಿಯಾಗಿ ಉತ್ತರ ಹೇಳಬೇಕು ಎನ್ನತಕ್ಕಂಥದ್ದು ನಮಗೆ ತೋಚುತ್ತಿಲ್ಲ. ಆದ್ದರಿಂದ, ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಒತ್ತಾಯ ಪೂರ್ವಕವಾಗಿ ಸೆಳೆಯುವುದಕ್ಕೆ ಬಯಸುವುದೇನೆಂದರೆ, ಇದರ ಬಗ್ಗೆ ತಮ್ಮಿಂದ ಅತೀ ಶೀಘ್ರವಾಗಿ ಉತ್ತರ ಬಯಸಿ ನನ್ನ ಮಾತನ್ನು ಮುಗಿಸುತ್ತೇನೆ. ದಯಮಾಡಿ ಇದರ ಬಗ್ಗೆ ಎರಡು ಮಾತನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ) :- ಮಾನ್ಯ ಉಪಾಧ್ಯಕ್ಷರೆ, 2007-08ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಪ್ರೌಢ ಶಾಲೆ ಮತ್ತು ಪದವಿ ಪೂರ್ವ

ಕಾಲೇಜುಗಳನ್ನು ರಾಜ್ಯಾದ್ಯಂತ ಮಂಜೂರು ಮಾಡಿದೆ. 2006-07 ಮತ್ತು 2007-08ನೇ ಸಾಲಿನಲ್ಲಿಯೂ ಕೂಡ ಮಂಜೂರು ಮಾಡಿದೆ. ಇವತ್ತಿನ ದಿವಸ ಶಾಲೆ ಪ್ರಾರಂಭವಾಗಿದೆ, ಆದರೆ, ಶಾಲಾ ಕಟ್ಟಡ ಇಲ್ಲದೆ ಮಕ್ಕಳು ನೆಲದ ಮೇಲೆ ಕುಳಿತು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಸಾರಿ ಮಾನ್ಯ ಮಂತ್ರಿಗಳು 40 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಮಂಜೂರಾಗಿರತಕ್ಕಂಥ ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡ ಮತ್ತು ಫರ್ನಿಚರ್ ಒದಗಿಸುವುದಕ್ಕೆ 40 ಕೋಟಿ ರೂಪಾಯಿ ಸಾಕಾಗುವುದಿಲ್ಲ. ಆದ್ದರಿಂದ, ತಾವು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮನವಿ ಮಾಡಿ ಹೆಚ್ಚಿನ ಅನುದಾನ ಪಡೆದುಕೊಳ್ಳಬೇಕು. ಏಕೆಂದರೆ, ಶಿಕ್ಷಣಕ್ಕೆ ಹೆಚ್ಚಿನ ಅನುದಾನ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಹೈಸ್ಕೂಲ್ ಮತ್ತು ಕಾಲೇಜುಗಳಿಗೆ ಪ್ರಾರಂಭಕ್ಕೆ ಮಂಜೂರಾತಿ ಕೊಟ್ಟಿದ್ದೀರಿ. ಆದರೆ, ಇವುಗಳಿಗೆ ಕಟ್ಟಡ ಇಲ್ಲ. ಇವತ್ತಿನ ದಿವಸ ಶಾಲೆ ಪ್ರಾರಂಭವಾಗಿದ್ದು, ಮಕ್ಕಳು ನೆಲದ ಮೇಲೆ ಕುಳಿತು ವ್ಯಾಸಂಗ ಮಾಡುವ ವಾತಾವರಣ ಇದೆ. ಅದರಲ್ಲಿಯೂ ವಿಶೇಷವಾಗಿ 10ನೇ ತರಗತಿ ಓದುತ್ತಿರುವ ಹೆಣ್ಣುಮಕ್ಕಳು ನೆಲದ ಮೇಲೆ ಕುಳಿತು ವ್ಯಾಸಂಗ ಮಾಡುವಂಥ ಪರಿಸ್ಥಿತಿ ನಮ್ಮ ಭಾಗದಲ್ಲಿದೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಿಕೊಡಬೇಕೆಂದು ಈ ಮೂಲಕ ಅವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಹೇಳಿರತಕ್ಕಂಥದ್ದು ಎರಡು ವರ್ಷಗಳ ಹಿಂದಿನ ಮಾತು. ಪ್ರೌಢ ಶಾಲೆ, ಜೂನಿಯರ್ ಕಾಲೇಜು ಮತ್ತು ಪ್ರಥಮ ದರ್ಜೆ ಕಾಲೇಜುಗಳಿಗೆ 2006-07ನೇ ಸಾಲಿನಲ್ಲಿ ಆರ್‌ಐಡಿಎಫ್ ಮಂಜೂರಾಗಿದೆ. ಆಗ ಏನಾಯಿತ್ತೆಂದರೆ, ಅವತ್ತಿನ ದಿವಸ 3.60 ಲಕ್ಷ ರೂಪಾಯಿ ಅಂದಾಜು ಮೊತ್ತಕ್ಕೆ ಒಂದು ಕೊಠಡಿ ಎಂದು ನಬಾರ್ಡ್‌ನಲ್ಲಿ ಅಪ್ರೂವಲ್ ಆಗಿ ಬಂದ ಮೇಲೆ ಸದರಿ ಹಣ ಸಾಕಾಗದೆ ಈ ಕೆಲಸಗಳೆಲ್ಲಾ ಇಡೀ ರಾಜ್ಯದಲ್ಲಿ ಅಪೂರ್ಣಗೊಂಡಿವೆ. ಇದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ, ಈ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ತಿಂಗಳು ಕಳೆದಿದೆ. ಈ ಸಂದರ್ಭದಲ್ಲಿ ನಾನು ಅವರಿಗೆ ಹೇಳುವುದೇನೆಂದರೆ, ಈ ವರ್ಷದ ಯೋಜನೆಯಲ್ಲಿ ಅದನ್ನು ಸೇರಿಸುವಂಥ ಪ್ರಯತ್ನವನ್ನು ಶಿಕ್ಷಣ ಸಚಿವರು ಮಾಡಲಿಲ್ಲ. ಹೊಸ ಕಾಲೇಜುಗಳನ್ನು ಏತಕ್ಕಾಗಿ ಪ್ರಾರಂಭ ಮಾಡಬೇಕಾಗಿತ್ತು. ಮಕ್ಕಳ ಸಂಖ್ಯೆ ಇರುವ ಕಡೆ ಬಿಟ್ಟು ಸಂಖ್ಯೆ ಇಲ್ಲದ ಕಡೆ ಪ್ರಾರಂಭ ಮಾಡಿ ಇಲ್ಲಿಗೆ ಬೇರೆ ಕಡೆಯಿಂದ ಶಿಫ್ಟ್

ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ಯಾವಾಗ ಮಾಡುತ್ತಾರೆಂಬುದನ್ನು ಹೇಳಬೇಕು. ಹೊಸ ಕಾಲೇಜುಗಳಿಗೆ ಆರ್‌ಐಡಿಎಫ್-13 ಮತ್ತು 14 ರಲ್ಲಿ ಹಣ ಸೇರಿಸಿಲ್ಲ. ಇದರಲ್ಲಿ ಸ್ವಲ್ಪ ತಾರತಮ್ಯವಾಗಿದೆ ಎಂದು ನನಗೆ ಅನಿಸುತ್ತಿದೆ. ಆದ್ದರಿಂದ, ಈ ಮಕ್ಕಳ ವಿದ್ಯಾಭ್ಯಾಸದಲ್ಲಿ ತಾರತಮ್ಯ ಮಾಡದೆ ಪಕ್ಷಬೇದವನ್ನು ಬಿಟ್ಟು ಎಲ್ಲರು ಕೆಲಸ ಮಾಡಬೇಕಾಗುತ್ತದೆ. ಹೊಸದಾಗಿ ಕಾಲೇಜು ಮಂಜೂರು ಆಗಿ ಅಲ್ಲಿ ಈಗ ಸುಮಾರು 20 ಜನ ಸೇರಿರಬಹುದು. ನೀವು ಅಲ್ಲಿನ ವ್ಯವಸ್ಥೆಯನ್ನು ಉತ್ತಮಗೊಳಿಸದೆ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ತಾವು ಹೇಳಿದರೆ ಪೋಷಕರು ಹೇಗೆ ಮಕ್ಕಳನ್ನು ಕಳುಹಿಸುತ್ತಾರೆ. ಆದ್ದರಿಂದ, ಸಚವರಾಗಿರುವ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಏನು ಮಾಡಬೇಕೆಂದರೆ, ಇದನ್ನು ದಯವಿಟ್ಟು ಆರ್‌ಐಡಿಎಫ್ 13,14 ರಲ್ಲಿಯಾದರೂ ಸೇರಿಸಬೇಕು. ಇಲ್ಲದಿದ್ದರೆ ಸರ್ಕಾರದ ಯಾವುದಾದರೊಂದು ಯೋಜನೆಯಲ್ಲಿ ಸೇರಿಸಬೇಕೆಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬೇಕೆಂದು ಹೊರಟಿದ್ದಾರೆ. ಇದಕ್ಕಾಗಿ ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ, ಭಾರತ ದೇಶಕ್ಕೆ ಪಾಕಿಸ್ತಾನದಿಂದ ಜನ ಬರಬಹುದೆಂದು ಪ್ರತಿ ಶಾಲೆಯಲ್ಲಿ 100 ಮಕ್ಕಳನ್ನು ತಯಾರು ಮಾಡುವುದಕ್ಕೆ ಹೊರಟ್ಟಿದ್ದಾರೆ. ಇದು ಒಳ್ಳೆಯದು ನಾವು ಬೇಡವೆಂದು ಹೇಳುವುದಿಲ್ಲ. ಆರ್‌ಐಡಿಎಫ್ 13 ರಲ್ಲಿ ಈಗಾಗಲೇ 115 ಕೋಟಿ ರೂಪಾಯಿಗಳನ್ನು ಪ್ರೌಢ ಶಾಲೆಗಳಿಗೆ ಕೊಟ್ಟಿದ್ದೀರಿ. ಅದೇ ರೀತಿಯಾಗಿ ಪದವಿ ಪೂರ್ವ ಕಾಲೇಜುಗಳಿಗೆ 70 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಇವರೆಡೂ ಸಹ ಇವರ ಇಲಾಖೆಗೆ ಬರುತ್ತದೆ. ಆರ್‌ಐಡಿಎಫ್-14ರಲ್ಲಿ ಬಾಕಿ ಎಲ್ಲೆಲ್ಲಿ ಉಳಿದಿದೆಯೋ ಅಲ್ಲಿಗೆ ತೆಗೆದುಕೊಳ್ಳಿ, ಇದಕ್ಕೆ ನಮದೇನು ಅಭ್ಯಂತರ ಇಲ್ಲ. ಇದಕ್ಕೆ ಈಗಾಗಲೇ ನಬಾರ್ಡ್‌ನಿಂದ ಅನುಮತಿ ಕೂಡ ಬಂದಿದೆ. ಆದರೆ, ಈಗ ಗುತ್ತಿಗೆಯನ್ನು ಯಾರಿಗೆ ಕೊಡಬೇಕೆಂಬುದರ ಬಗ್ಗೆ ಜಿಜ್ಞಾಸೆ ನಡೆಯುತ್ತಿದೆ. ಕೆಲವು ಜಿಲ್ಲಾ ಪಂಚಾಯತ್‌ನಲ್ಲಿ ಟೆಂಡರ್ ಕರೆಯಬೇಕೆಂದು ಹೇಳುತ್ತಿದ್ದಾರೆ. ಆದರೆ, ಹಣ ಬಿಡುಗಡೆ ಆಗದೆ ಇರುವುದಕ್ಕೆ ಕಾರಣವೇನು? ಆರ್‌ಐಡಿಎಫ್ 14ರಲ್ಲಿ ಎಲ್ಲಾ ಕಡೆ ತೆಗೆದುಕೊಳ್ಳಿ. ಹಾಸನ ಜಿಲ್ಲೆಗಲ್ಲದೆ ಬೇರೆ ಜಿಲ್ಲೆಗಳಿಗೂ ಕೊಡಿ. ನಾನೇನು ಬೇಡವೆಂದು ಅವರನ್ನು ಹಿಡಿದುಕೊಂಡಿಲ್ಲ.

ಶ್ರೀ ಆರ್. ಧ್ರುವನಾರಾಯಣ್ :- ಈ ಸಾರಿ ಶಿವಮೊಗ್ಗ ಜಿಲ್ಲೆಗೆ ಕಳೆದ ಸಾರಿ ಹಾಸನ ಜಿಲ್ಲೆಗೆ ಅಷ್ಟೆ ಸೀಮಿತವಾಗಿದೆ. ಕಳೆದ ಸಲ ದುಡ್ಡೆಲ್ಲಾ ತೆಗೆದುಕೊಂಡು ಹಾಸನ ಜಿಲ್ಲೆಗೆ ಹಾಕಿಕೊಂಡಿದ್ದೀರಿ. ಈ ಸಾರಿ ಶಿವಮೊಗ್ಗ ಜಿಲ್ಲೆಗೆ ಹಾಕಿಕೊಂಡಿದ್ದಾರೆ. ಎರಡು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಜಿಲ್ಲೆಗಳಿಗೆ ಆದ್ಯತೆಯನ್ನು ಕೊಡುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಮಾತನಾಡಿದ ನಂತರ ಅವರು ಮಾತನಾಡಲಿ. ಎರಡು ನಿಮಿಷ ಅವರು ಸುಮ್ಮನಿರುವುದಕ್ಕೆ ಹೇಳಿ.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಉಪಾಧ್ಯಕ್ಷರೆ, ಕಳೆದ ಸಾರಿ ಹಾಸನ ಜಿಲ್ಲೆಗೆ ಹೆಚ್ಚಿನ ಅನುದಾನ ತೆಗೆದುಕೊಂಡರು. ಈ ಸಾರಿ ಶಿವಮೊಗ್ಗ ಜಿಲ್ಲೆಗೆ ತೆಗೆದುಕೊಂಡಿದ್ದಾರೆ. ಮಂತ್ರಿ ಎಂದರೆ, ಅವರು ಇಡೀ ರಾಜ್ಯಕ್ಕೆ ಮಂತ್ರಿಯಾಗಿರಬೇಕು. ಕೇವಲ ಹಾಸನ ಜಿಲ್ಲೆಗೆ ಮಂತ್ರಿಯಲ್ಲ. ಮುಖ್ಯ ಮಂತ್ರಿ ಎಂದರೆ ಕೇವಲ ಶಿವಮೊಗ್ಗ ಜಿಲ್ಲೆಗೆ ಮುಖ್ಯ ಮಂತ್ರಿಯಲ್ಲ. ಅವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿರುತ್ತಾರೆ. ಇವರು ಇಡೀ ಹಣವನ್ನು ಹಾಸನ ಜಿಲ್ಲೆಗೆ ಹಾಕಿಕೊಂಡರು.

ಶ್ರೀ ಹೆಚ್.ಡಿ. ರೇವಣ್ಣ :- ನೀವು ಮಂತ್ರಿಯಾಗಿ ಮಾಡಿಕೊಳ್ಳಿ.

ಶ್ರೀ ಆರ್. ಧ್ರುವನಾರಾಯಣ್ :- ಮಂತ್ರಿಯಾದರೆ ನಾವು ಕೂಡ ಮಾಡುತ್ತೇವೆ. ನೀವೇನು ಹಾಸನ ಜಿಲ್ಲೆಗೆ ಮಾತ್ರ ಮಂತ್ರಿಯಾಗಿದ್ದೀರಾ? ಇಡೀ ರಾಜ್ಯಕ್ಕೆ ಮಂತ್ರಿಯಾಗಬೇಕು.

ಶ್ರೀ ಎ. ಮಂಜು :- ಮಾನ್ಯ ಉಪಾಧ್ಯಕ್ಷರೆ, ಅವರು ಹಾಸನ ಜಿಲ್ಲೆಗೆ ಮಾಡಿಲ್ಲ. ಕೇವಲ ಅವರ ಕ್ಷೇತ್ರಕ್ಕೆ ಮಾಡಿಕೊಂಡಿದ್ದಾರಷ್ಟೆ. ಆದ್ದರಿಂದ, ಮಾನ್ಯ ಧ್ರುವನಾರಾಯಣ್‌ರವರು ಹೇಳುವುದನ್ನು ನಾನು ಒಪ್ಪುವುದಿಲ್ಲ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ್ :- ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳೆಂದರೆ ಕೇವಲ ಶಿವಮೊಗ್ಗಕ್ಕೆ ಅಷ್ಟೇ ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ನಾವು ಬಂದಾಗ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುಮತಿ ಕೊಟ್ಟಿದ್ದೇವೆ...

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ್ :- ತಾವು ಹೊಳೆನರಸೀಪುರ, ಹಾಸನ ಜಿಲ್ಲೆಗೆ ಮಾತ್ರ ಹಾಕಿಕೊಂಡಿದ್ದೀರಿ. ನೀವು ಇಡೀ ರಾಜ್ಯಕ್ಕೆ ಎಲ್ಲಿ ಕೊಟ್ಟಿದ್ದೀರಿ?

ಅಧ್ಯಕ್ಷರು :- ಮಾನ್ಯ ಸಚಿವರೆ, ತಾವು ಉತ್ತರ ಕೊಡಿ.

ಶ್ರೀ ಎಚ್ಚೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಇಡೀ ಸದನದ ಸದಸ್ಯರ ಭಾವನೆಗಳನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆರ್‌ಐಡಿಎಫ್-12 ಮತ್ತು ಅಪೆಂಡಿಕ್ಸ್ -ಇ ನಲ್ಲಿ ಅಂದರೆ, 4020 ಹೆಡ್‌ನಲ್ಲಿ ಹಣ ಬಿಡುಗಡೆ ಮಾಡಿದ್ದೇವೆ. ಈ ಕೆಲಸ ರಾಜ್ಯದಲ್ಲಿ ಅರ್ಧ ಆಗಿದೆ ಎಂದು ಹೇಳಿದ್ದಾರೆ. ಎಸ್.ಆರ್. ರೇಟ್ ಇತ್ಯಾದಿ ವ್ಯತ್ಯಾಸವಾಗಿರುವುದರ ಕಾರಣದಿಂದಾಗಿ ಕೇವಲ RIDF-12ರದ್ದು ಯೋಚನೆ ಮಾಡಿದರೆ, ನಮಗೆ 20 ಕೋ.ರೂ. ಜಾಸ್ತಿ ಬೇಕಾಗುತ್ತದೆ. ರೇವಣ್ಣನವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಧ್ರುವನಾರಾಯಣ್‌ರವರು ಹೇಳಿದರು, ತಾವು ಸಿಟ್ಟು ಮಾಡಿಕೊಳ್ಳಬಾರದು. ಈ ಪರಿಸ್ಥಿತಿ ಗೊತ್ತಿದೆ. Appendix E ನಲ್ಲಿ . . . .

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- . . . . Engineer ಗಳಿಗೆ ಹೇಳಿ. ಸರಿಯಾಗಿ ಮಾಡದಿದ್ದರೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಚ್ಚೇಶ್ವರ ಹೆಗಡೆ ಕಾಗೇರಿ :- Appendix E ನಲ್ಲಿ ನಾವು 20 ಕೋಟಿ ರೂ.ಗಳ ಹಣಕಾಸಿನ ಯೋಜನೆಯನ್ನಿಟ್ಟುಕೊಂಡರೆ, PWD ಯಲ್ಲಿ ನಿಮ್ಮ ಇಂಜಿನಿಯರ್‌ಗಳಿಗೆ ನಾವು ಹಣ ಬಿಡುಗಡೆ ಮಾಡುತ್ತೇವೆ. 70 ಕೋಟಿ ರೂ.ಗಳ ಕೆಲಸ ನಡೆದಿದೆ. ಮಂಜೂರಾಗಿರುವುದು 20 ಕೋಟಿ ರೂ., ಕೆಲಸವಾಗಿರುವುದು 40 ಕೋಟಿ ರೂ.ಗಳಷ್ಟದ್ದು ಇದೆ. ಇನ್ನೂ ನಮಗೆ 50 ಕೋ.ರೂ.ಗಳಷ್ಟು ಬೇಕಾಗಿದೆ. ಬಹುಶ: ಹಿಂದೆ PWD ಇಲಾಖೆಯಲ್ಲಿ ಏನೇನು ದೋಷವಾಗಿದೆ ಅದನ್ನು ನಮ್ಮ ಸರ್ಕಾರದಲ್ಲಿ ಮಾನ್ಯ ಸಿ.ಎಂ. ಉದಾಸಿಯವರು ಸರಿಪಡಿಸುತ್ತಿದ್ದಾರೆ. ಅದನ್ನೆಲ್ಲವನ್ನೂ ಮಾಡುತ್ತಾರೆ, ಅದು ಬೇರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕೆಲಸ ಜಾಸ್ತಿಯಾಗಿದೆ, ದೋಷವೇನೂ ಆಗಿಲ್ಲ.

(ಗೊಂದಲ)

ಅಧ್ಯಕ್ಷರು :- ಇದು ಗಮನ ಸೆಳೆಯುವ ಸೂಚನೆ. ರಮೇಶ್ ಬಂಡಿಸಿದ್ದೇಗೌಡರವರು ಮಾತ್ರ ಪ್ರಶ್ನೆ ಕೇಳಲಿ. ಉಳಿದವರ್ಯಾರೂ ಈ ಚರ್ಚೆಯಲ್ಲಿ ಭಾಗವಹಿಸಬೇಡಿ. ಅವರು ಏನಾದರೂ ಕೇಳುವುದಿದ್ದರೆ ಕೇಳಿ ಕ್ಲಿಯರ್ ಮಾಡಿಕೊಳ್ಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಕೆ.ಆರ್. ಸಾಗರ, ಬೆಳಗೊಳದ್ದು ಈ ಎಲ್ಲಾ ಸಮಸ್ಯೆಗಳಡಿಯಲ್ಲಿಯೇ ನಿಮ್ಮದೂ ಇದೆ. ಪ್ರತ್ಯೇಕವಾಗಿ ನಿಮ್ಮ Junior College ಗೆ ಮಾತ್ರ ತೊಂದರೆಯಾಗುತ್ತಿದೆ ಎಂದೇನಲ್ಲ. ಇಡೀ ರಾಜ್ಯದಲ್ಲಿ RIDF-12 ರಲ್ಲಿ Appendix E ನಲ್ಲಿ ತೆಗೆದುಕೊಂಡಿರುವಂಥ ಎಲ್ಲಾ Junior College ಕಟ್ಟಡಗಳನ್ನು ಪೂರ್ಣಗೊಳಿಸುವುದಕ್ಕೆ ನಮಗಿನ್ನೂ ಹೆಚ್ಚಿನ ಹಣಕಾಸಿನ ನೆರವು ಬೇಕಾಗಿದೆ. ಹಣಕಾಸು ಇಲಾಖೆಯ ಜೊತೆ ನಾವು ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅವರ work progress ನೋಡಿ ಹಣ ರಿಲೀಸ್ ಮಾಡಬೇಕೆಂದು ನಾವು PWD ಯವರಿಗೆ ಹೇಳಿದ್ದೇವೆ. ನಾವು South, North ನವರಿಗೆ ಹಣ ಬಿಡುಗಡೆ ಮಾಡುತ್ತಿದ್ದೇವೆ. ಹಣ ಬಿಡುಗಡೆ ಮಾಡಿರುವ ವಿವರಗಳನ್ನು ಕೊಟ್ಟಿದ್ದೇವೆ. ಹಾಗಾಗಿ, work progress ಪ್ರಕಾರ ಹಣ ಬಿಡುಗಡೆಯಾಗುತ್ತಿದೆ. ಈ ಎಲ್ಲಾ ಕಾಮಗಾರಿಗಳನ್ನು ನಾವು ಮುಗಿಸಿಕೊಡುತ್ತೇವೆ. PUC ಶಿಕ್ಷಣಕ್ಕೆ ಹಿಂದೆ ಯಾವ ಸರ್ಕಾರವೂ ಕೊಡದಿರುವಷ್ಟು ಗಮನವನ್ನು ನಮ್ಮ ಸರ್ಕಾರದಲ್ಲಿ ನಾವು ಕೊಟ್ಟಿದ್ದೇವೆ. ಕೇವಲ ನಿವೃತ್ತರಾದ ಉಪನ್ಯಾಸಕರನ್ನಲ್ಲ, ಸುಮಾರು ಮೂರೂವರೆ ಸಾವಿರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದೇವೆ. ಹಾಗಾಗಿ, ನಮ್ಮ ಸರ್ಕಾರದಲ್ಲಿ PUC ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದೇವೆ. ಕೊರತೆ ಇದೆ. ಆ ಕೊರತೆ ಹಿಂದಿನಿಂದ ಬೆಳೆದು ಬಂದಿದೆ. ಆ ಕೊರತೆಯನ್ನು ಸಹ ನಾವು ನೀಗಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಆ ಕಟ್ಟಡವನ್ನು ನಾವು ಪೂರ್ಣಗೊಳಿಸಿಕೊಡುತ್ತೇವೆ.

ಶ್ರೀ ರಮೇಶ್‌ಬಾಬು ಬಂಡಿಸಿದ್ದೇಗೌಡ :- Appendix E ಸೇರಿ ಕೊನೆ ಗಳಿಗೆಯಲ್ಲಿ ಇದನ್ನು ಕೈಬಿಟ್ಟಿದ್ದಾರೆ. Appendix E ಗೆ ಸೇರಿಸುವುದನ್ನು ಏಕೆ change ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್. ಧ್ರುವನಾರಾಯಣ :- Appendix E ನಲ್ಲಿ ಸುಮಾರು 100 ಕೋಟಿ ರೂ.ಗಳನ್ನು ಕೇವಲ ಶಿವಮೊಗ್ಗ ಜಿಲ್ಲೆಗೇ ಹಾಕಿಕೊಂಡಿದ್ದಾರೆ, ಬೇರೆ ಜಿಲ್ಲೆಗಳನ್ನು ಕಡೆಗಣಿಸಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಬೆಳಗೊಳದ್ದು Appendix E ಯೋಜನೆಯಲ್ಲಿ 50 ಲಕ್ಷ ರೂ.ಗಳಲ್ಲಿ ಈ ಯೋಜನೆ ನಿರ್ಮಾಣ ಮಾಡುತ್ತಿದ್ದು, ನಾವು ಎರಡೂವರೆ ಕೋಟಿ ರೂ.ಗಳನ್ನು South Chief Engineer ರವರಿಗೆ ಕೊಟ್ಟಿದ್ದೇವೆ. ಅವರಿಂದ work progress ಆಗಿರುವುದನ್ನು ನೋಡಿ ಅವರಿಗೆ ಹಣ ರಿಲೀಸ್ ಮಾಡುತ್ತಾರೆ.

(ಗೊಂದಲ)

ಶ್ರೀ ರಮೇಶ್‌ಬಾಬು ಬಂಡಿಸಿದ್ದೇಗೌಡ :- ನನಗೆ ಸ್ಪಷ್ಟವಾದ ಭರವಸೆ ಸಿಕ್ಕಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- RIDF ನಲ್ಲಿ ಮಾಡುವುದಕ್ಕೆ ಏನೂ ತೊಂದರೆಯಿಲ್ಲ.

ಅಧ್ಯಕ್ಷರು :- ಆ ಕಾಮಗಾರಿಯನ್ನು ಬೇಗ ಕಂಪ್ಲೀಟ್ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು :- ಶ್ರೀ ಎಂ.ಟಿ. ಕೃಷ್ಣಪ್ಪನವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣದ ಮಂತ್ರಿಗಳು ಇವತ್ತು permission ಕೇಳಿದ್ದಾರೆ. ನಾಳೆ ನಿಮಗೆ ಉತ್ತರ ಕೊಡಿಸಲಾಗುವುದು. ನಾಳೆಯು agenda ದಲ್ಲಿ ಇದನ್ನು ಸೇರಿಸಲಾಗುತ್ತದೆ.

ಶ್ರೀ ಎಂ.ಟಿ ಕೃಷ್ಣಪ್ಪ :- ಚುನಾವಣೆಗೆ ಮುನ್ನ 8 ಕ್ಷೇತ್ರಗಳಿಗೆ additional fund ಬಿಡುಗಡೆ ಮಾಡಿದರು. ಅದರಲ್ಲಿ ನನಗೂ ಬಿಡುಗಡೆ ಮಾಡಿದ್ದರು.

ಅಧ್ಯಕ್ಷರು :- ಕೃಷ್ಣಪ್ಪನವರೆ, ನಾಳೆ ನೀವು ಪ್ರಸ್ತಾಪಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ನಾನು ಗಮನ ಸೆಳೆಯುವ ಸೂಚನೆ ಕೊಟ್ಟು ಒಂದು ವಾರವಾಯಿತು. ಅದಕ್ಕೆ ಇನ್ನೂ ಉತ್ತರ ಬಂದಿಲ್ಲವಲ್ಲ. ಇನ್ನು ಮೂರು ದಿವಸಗಳಲ್ಲಿ ಅಧಿವೇಶನ ಮುಗಿಯುತ್ತದೆ, ಇನ್ನು ಯಾವಾಗ ನೀವು ಅವಕಾಶ ಕೊಡುತ್ತೀರಿ?

ಅಧ್ಯಕ್ಷರು :- ನಾಳೆಯ agenda ದಲ್ಲಿ ಬರುತ್ತದೆಂದು ಹೇಳಿದೆನಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಕೇಳುತ್ತಿರುವುದು ಈ ವಿಚಾರವಲ್ಲ, ಅವರು ಬೇರೆ ವಿಚಾರ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ :- Not this subject. ದಯವಿಟ್ಟು ಕ್ಷಮಿಸಿ. 8 ಕ್ಷೇತ್ರಗಳಲ್ಲೇನು ಉಪ ಚುನಾವಣೆ ಆಯಿತು, ಆ ಚುನಾವಣೆ ನಡೆಯುವ ಕ್ಷೇತ್ರಗಳಿಗೆ additional fund ಕೊಟ್ಟಿದ್ದರು. ಆದರೆ, ಚುನಾವಣೆ ಆದಮೇಲೆ ಮದ್ದೂರಿಗೆ ಕೊಟ್ಟಿರುವ additional fund ಅನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು :- ಕೃಷ್ಣಪ್ಪನವರೆ, please, ಇವತ್ತು ನಿಮ್ಮ ಗಮನ ಸೆಳೆಯುವ ಸೂಚನೆ ಮೂಲಕ ದಂಡಿನಶಿವರಕ್ಕೆ ಎರಡು ವರ್ಷಗಳ ಹಿಂದೆ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿದ್ದರ ಬಗ್ಗೆ ಹಣ ಬಿಡುಗಡೆಯಾಗಿಲ್ಲವೆಂದು ನೀವು ಕೇಳುತ್ತಿದ್ದೀರಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಇದಕ್ಕೆ ಮೊದಲು ಆ ವಿಷಯದ ಬಗ್ಗೆ ಕೊಟ್ಟಿದ್ದೆ. ಅದಕ್ಕೆ ಇನ್ನೂ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು :- ಅದನ್ನು ಈ ಸದನದಲ್ಲಿ ಕೇಳುವುದಲ್ಲ. ನೀವು ಬಂದು ಕೇಳಿ ಅದಕ್ಕೆ explain ಕೊಡುತ್ತೇವೆ. ನನ್ನ Chamber ಗೆ ಬಂದು ಕೇಳಿ ನಾನು ಹೇಳುತ್ತೇನೆ. ಇಲ್ಲಿ ಅದನ್ನು ಕೇಳುವುದಲ್ಲ. ಬೇಕಾದರೆ, file ನಲ್ಲಿರುತ್ತದೆ, ಬಂದು ಕೇಳಿ. 224 ಜನ ಶಾಸಕರ 100 calling attention ಬಂದಿದೆ. ಯಾವುದು ಬಂದಿಲ್ಲವೆಂದು ಇಲ್ಲಿ ಹೇಳಬೇಕೇನು? ಇವತ್ತು ನಿಮ್ಮ calling attention ಯಾವುದಿದೆ ಅದಕ್ಕೆ ನಾಳೆ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನಾಳೆಯ agenda ದಲ್ಲಿ ತೆಗೆದುಕೊಳ್ಳುತ್ತೇನೆ. ಆಗ ನೀವು ಪ್ರಸ್ತಾಪ ಮಾಡಿ. ಪ್ರಕಾಶ್ ಬಿ. ಹುಕ್ಕೇರಿಯವರೆ, ನಿಮ್ಮ ಗಮನ ಸೆಳೆಯುವ ಸೂಚನೆಯು Major Irrigation ನಿಂದ Minor Irrigation ಗೆ transfer ಆಗಿದೆ. ಇದನ್ನು ನಾಳೆಯ agenda ದಲ್ಲಿ ತೆಗೆದುಕೊಳ್ಳುತ್ತೇನೆ.